



(6ನೇ ಪುಟದಿಂದ)

ಕೆಲ ವರ್ಷಗಳ ಹಿಂದೆ ಸರ್ಕಾರ ಈ ಪ್ರದೇಶವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿಸಲು ಮುಂದಾಗಿ ಸುಮಾರು 10 ಲಕ್ಷ ರೂಪಾಯಿ ವೆಚ್ಚದಲ್ಲಿ ಜಲಪಾತದ ಕೆಳಕ್ಕಿಳಿಯಲು 350ಕ್ಕೂ ಅಧಿಕ ಮೆಟ್ಟಿಲುಗಳನ್ನು ನಿರ್ಮಿಸಿದೆ. ಇನ್ನೂ 400ಕ್ಕೂ ಅಧಿಕ ಮೆಟ್ಟಿಲುಗಳ ಅವಶ್ಯಕತೆ ಇದೆ.

ಬೆಟ್ಟದಳ್ಳಿ ಗ್ರಾಮ ಪಂಚಾಯ್ತಿ ವತಿಯಿಂದ ಜಲಪಾತಕ್ಕೆ ಹೋಗುವವರಿಗೆ ಕನಿಷ್ಠ ಶುಲ್ಕವನ್ನು ನಿಗದಿಪಡಿಸಲಾಗಿದೆ. ಜೀಪು ಕಾರುಗಳಿಗೆ 25ರೂಪಾಯಿಗಳಾದರೆ ಟ್ರಾವೆಲ್ಲರ್ ಇನ್ನಿತರ ವಾಹನಗಳಿಗೆ 50ರೂಪಾಯಿ ಶುಲ್ಕವಿದೆ. ಬೈಕು ಇತ್ಯಾದಿ ದ್ವಿಚಕ್ರ ವಾಹನಗಳಿಗೆ 10 ರೂಪಾಯಿ ಮಾತ್ರ. ಹಂಚಿನಳ್ಳಿಯಿಂದ 3 ಕಿ.ಮೀ ಸಾಗುವಾಗ ಒಂದು ಗೇಟ್ ಕಾಣಸಿಗುತ್ತದೆ. ಇಲ್ಲಿ ಶುಲ್ಕ ಪಾವತಿಸಿ ಮತ್ತೆ ಕೊಂಚ ದೂರ ಮಣ್ಣಿನ ರಸ್ತೆಯಲ್ಲಿ ಸಾಗಬೇಕು. ಈ ಮಾರ್ಗದಲ್ಲಿ ಮಳೆಗಾಲದಲ್ಲಿ ಹೋಗುವುದು ಕಷ್ಟವಾದರೂ, ಮಲ್ಲಳ್ಳಿ ಜಲಪಾತದ ರೌದ್ರ ನರ್ತನ ನೋಡಲು ಅದೇ ಸಕಾಲ.

ಜಲಪಾತಕ್ಕೆ ಖಾಸಗಿ ವಾಹನಗಳಲ್ಲೇ ಸಾಗುವುದು ಅನಿವಾರ್ಯ. ಸಾರಿಗೆ ವ್ಯವಸ್ಥೆಯೂ ಪ್ರವಾಸಿಗರಿಗೆ ಅನುಕೂಲವಾಗುವಂತಿಲ್ಲ. ವಾಹನ ನಿಲುಗಡೆಗೆ ಗೇಟ್‌ನಿಂದ ಸ್ವಲ್ಪ ದೂರದಲ್ಲಿರುವ ವಿದ್ಯುತ್ ಸ್ಥಾವರದ ಬಳಿ ಮೈದಾನವನ್ನು ನಿರ್ಮಿಸಲಾಗಿದೆ. ಇಲ್ಲಿಂದ ಮುಂದೆ ರಸ್ತೆ ತೀರಾ ಹದಗೆಟ್ಟಿರುವುದರಿಂದ ವಾಹನದಲ್ಲಿ ಮುಂದೆ ಸಾಗುವುದು ಕಷ್ಟ. ಅಂತೆಯೇ ವಾಹನಗಳಲ್ಲಿ ಯಾವುದೇ ಬೆಲೆಬಾಳುವ ವಸ್ತುಗಳನ್ನಿಟ್ಟು ಮುಂದೆ ಸಾಗುವುದೂ ಸೂಕ್ತವಲ್ಲ. ನಿರ್ಜನ ಪ್ರದೇಶವಾದ್ದರಿಂದ ಕಳ್ಳಕಾಕರ ಹಾವಳಿ ನಮ್ಮನ್ನು ಪರಿತಪಿಸುವಂತೆ ಮಾಡಬಹುದು. ಅಲ್ಲದೆ ಇಲ್ಲಿ ಯಾವುದೇ ಮೊಬೈಲ್ ಫೋನ್‌ಗೆ ಸಿಗ್ನಲ್ ಸಿಗುವುದಿಲ್ಲ!

ಮೈದಾನದಿಂದ ಹತ್ತು ನಿಮಿಷ ಕಾಲ್ನಡಿಗೆಯಲ್ಲಿ ಸಾಗಬೇಕು. ಗುಡ್ಡದ ತುದಿಯಿಂದ, ಕುಮಾರಧಾರಾ ನದಿಯು ಬಂಡೆಗಳೆಡೆಯಿಂದ ಬೀಳುವ ದೃಶ್ಯ ಪ್ರವಾಸಿಗರ ಮನಸ್ಸನ್ನು ಸೆಳೆಯುತ್ತದೆ. ಮೆಟ್ಟಿಲುಗಳನ್ನು ಇಳಿದು ಜಲಪಾತಕ್ಕೆ ಸಾಗುವ ಕ್ಷಣಗಳು ಜೀವನದಲ್ಲಿ ಎಂದೆಂದೂ ಮರೆಯಲಾಗದ ಅನುಭವವೇ ಸರಿ. ಜಾಗರೂಕತೆಯೂ ಅಷ್ಟೇ ಅಗತ್ಯ. ನಿರ್ಮಿಸಿದ ಮೆಟ್ಟಿಲುಗಳ ಬದಿಯಲ್ಲಿ ಆಧಾರಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಎಚ್ಚರ ತಪ್ಪಿದರೆ ಕಂದಕ ದರ್ಶನ ಖಚಿತ. ಜಲಪಾತದ ನೀರಿಗಿಳಿದು ಮೋಜು ಮಸ್ತಿ ಮಾಡುವ ಸಾಹಸ ಮಾಡದಿದ್ದರೆ ಒಳಿತು. ಆಳ ಹೆಚ್ಚಾಗಿದ್ದು ನೀರಿನ ರಭಸವೂ ಅಧಿಕ.

ಸೋಮವಾರಪೇಟೆಯಿಂದ ಕೊಂಚ ದೂರದಲ್ಲಿ ಅಬ್ಬಿಮಟ್ಟ ಫಾಲ್ಸ್ ಎಂಬ ಇನ್ನೊಂದು ಜಲಧಾರೆಯನ್ನೂ ಕಾಣಲು ಸಾಧ್ಯ. ಸಾಗುವಾಗ ಸೂಚನಾ ಫಲಕಗಳು ಕಂಡರೂ ಮಲ್ಲಳ್ಳಿ ಜಲಪಾತದ ಬಗ್ಗೆ ಮಾಹಿತಿ ಹಂಚಿನಳ್ಳಿಯವರೆಗೂ ಕಾಣಸಿಗುವುದಿಲ್ಲ. ಹೀಗಾಗಿ ಪ್ರವಾಸಿಗರು ರಸ್ತೆಯ ಬಗ್ಗೆ ಗೊಂದಲಕ್ಕೀಡಾಗುತ್ತಾರೆ. ಎಲ್ಲಾ ಸೂಚನಾ ಫಲಕಗಳು ಪುಷ್ಪಗಿರಿಯ ರಸ್ತೆಯ ಮಾಹಿತಿಯನ್ನೇ ನೀಡುತ್ತವೆ. ಮಲ್ಲಳ್ಳಿಗೂ ಇದೇ ಮಾರ್ಗ ಎಂಬುದರಲ್ಲಿ ಸಂಶಯ ಬೇಡ. ಎಲ್ಲಾ ಸೂಚನಾ ಫಲಕಗಳನ್ನು ಸರಿಯಾಗಿ ಗಮನಿಸುವುದು ಅಗತ್ಯ.